122ನೇ ಕಿ.ಮೀ.ವರೆಗೆ ನೀರನ್ನು ಕೊಡುತ್ತೇವೆ ಎಂದು ಹೇಳಿದ್ದೆವು. ಅದರ ಪ್ರಕಾರ ನೀರನ್ನು ಕೊಟ್ಟಿದ್ದೇವೆ. ಕಳೆದ ಅಧಿವೇಶನದಲ್ಲಿ ನಾವು ಮುದ್ದಹನುಮೇಗೌಡರಿಗೆ ಉತ್ತರ ಕೊಡುತ್ತಾ 188ನೇ ಕಿ.ಮೀ.ವರೆಗೆ ನೀರು ಕೊಡುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡು ಆ ಪ್ರಕಾರ ಟೆಂಡರ್ ಕರೆದಿದ್ದೇವೆ ಎಂದು ಹೇಳಿದ್ದೇನೆ. ಮುದ್ದಹನುಮೇಗೌಡರು ಹೇಳಿದ ಹಾಗೆ ನಾವು ಕಳೆದ ಬಾರಿ ತುಮಕೂರಿಗೆ 75 ರಿಂದ 76 ಕೋಟಿ ರೂಪಾಯಿ ಹಣ ಖರ್ಚು ಮಾಡಿದ್ದೇವಲ್ಲದೇ ಇನ್ನೂ ಸುಮಾರು 18 ಕೋಟಿ ರೂಪಾಯಿಗಳ ಪೆಂಡಿಂಗ್ ಬಿಲ್‌ಗಳು ಇವೆ. ಈ ವರ್ಷ ಅಲ್ಲಿಗೆ ಹಣ ಕಡಿಮೆ ಕೊಟ್ಟಿರುವುದು ನಿಜ. ಮಾನ್ಯ ಹಣಕಾಸಿನ ಮಂತ್ರಿಗಳು ಬಜೆಟ್ ಭಾಷಣದ ಉತ್ತರದಲ್ಲಿ ಮಾತನಾಡುತ್ತ ಕಾವೇರಿ ಯೋಜನೆಗಳಲ್ಲಿ ಉಳಿದಿರತಕ್ಕಂಥ ಕಾಮಗಾರಿಗಳನ್ನು ಮುಗಿಸಲು ಇನ್ನೂ 2000 ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದಿದ್ದಾರೆ. ಅದು ಅರ್ಕಾವತಿ ಇರಬಹುದು ಅಥವಾ ಕಬಿನಿ ಇರಬಹುದು ಅಥವಾ ಯಾವುದೇ ಯೋಜನೆಗಳು ಅದರಲ್ಲಿ ಇದ್ದರೂ ಅವುಗಳೆಲ್ಲವೂ ಬರುತ್ತದೆ. ಆದರೆ 2000 ಕೋಟಿ ರೂಪಾಯಿಗಳಷ್ಟನ್ನೂ ಸರ್ಕಾರ ಒದಗಿಸುವುದಕ್ಕಾಗುವುದಿಲ್ಲ. ಆದಕಾರಣ ಇದಕ್ಕಾಗಿ ಒಂದು ನಿಗಮವನ್ನು ಮಾಡುವುದಕ್ಕೆ ಪ್ರಯತ್ನವನ್ನು ಮಾಡುವುದಾಗಿ ಹೇಳಿದ್ದಾರೆ. ಇಂದು ಬೆಳಿಗ್ಗೆ ಕೂಡ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕೆ ಮುಂಚಿತವಾಗಿಯೇ ಈ ವಿಷಯವನ್ನು ಅವರಿಂದ ಹೇಳಿಸಲು ಆಲೋಚನೆ ಮಾಡಿದ್ದೆ. ಆದರೆ ಉಪ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಕಾವೇರಿ ಜಲ ಭಾಗ್ಯ ನಿಗಮವನ್ನು ಮಾಡುವ ಉದ್ದೇಶದಿಂದ ಅದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ ಎಂದಿದ್ದಾರೆ. ಆದರೂ ಈಗಾಗಲೇ ತುಮಕೂರು ಭಾಗಕ್ಕೆ ಖರ್ಚು ಮಾಡಿರುವ ಹಣಕ್ಕಾಗಿ ಮಾನ್ಯ ಸದಸ್ಯರು ನಮ್ಮನ್ನು ಅಪ್ರಿಶಿಯೇಟ್ ಮಾಡಬೇಕಾಗಿತ್ತು. ಆ ಭಾಗಕ್ಕೆ 275 ಕೋಟಿ ರೂಪಾಯಿಗಳು ಏನಿದೆ ಅದಕ್ಕೂ ಹೆಚ್ಚು ಇನ್ನೂ 100 ಕೋಟಿ ರೂಪಾಯಿಗಳನ್ನು ಸಪ್ಲಿಮೆಂಟರಿ ಬಜೆಟ್‌ನಲ್ಲಿ ಕೊಡಬೇಕೆಂದು ನಾನು ಹಣಕಾಸಿನ ಮಂತ್ರಿಗಳನ್ನು ಕೇಳಿಕೊಂಡಿದ್ದೇನೆ. ಅದೂ ಬರುತ್ತದೆ. ಇದಲ್ಲದೇ ನಿಗಮವನ್ನು ಕೂಡ ಮಾಡಬೇಕೆಂದು ಆಲೋಚನೆಯನ್ನು ಮಾಡಿದ್ದೇವೆ. ನಮ್ಮ ಉದ್ದೇಶ ಏನಿದೆ ಅದನ್ನು 2000-2001ನೇ ಇಸವಿಯೊಳಗೆ ಪೂರ್ಣ ಮಾಡುತ್ತೇವೆ. ಈ ನಿಟ್ಟಿನಲ್ಲಿ ಮಾನ್ಯ ಸದಸ್ಯರು ಬೇಜಾರು ಮಾಡಿಕೊಳ್ಳುವ ಅವಶ್ಯಕತೆಯಿಲ್ಲ.

(ಚ) ಆಲೂರಿನಲ್ಲಿ ಕೇಂದ್ರ ಸರ್ಕಾರದ ವತಿಯಿಂದ ತೆಗೆದುಕೊಂಡ ಕುಡಿಯುವ ನೀರಿನ ವ್ಯವಸ್ಥೆಯ ಕಾರ್ಯಕ್ಕೆ ಆಡಳಿತಾತ್ಮಕ ಮಂಜೂರಾತಿ ಕೊಡುವ ಬಗ್ಗೆ

ಶ್ರೀ ಬಿ.ಬಿ.ಶಿವಪ್ಪ (ಸಕಲೇಶಪುರ ವಿಧಾನ ಸಭಾ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ಈಗ ನಗರಾಭಿವೃದ್ಧಿ ಸಚಿವರು ಇಲ್ಲಿಲ್ಲ. ಆದರೆ, ಮಾಜಿ ನಗರಾಭಿವೃದ್ಧಿ ಸಚಿವರಾದ ಬಚ್ಚೇಗೌಡರು ಇದ್ದಾರೆಯಾದ ಕಾರಣ ವಿಷಯ ಪ್ರಸ್ತಾಪಿಸುತ್ತೇನೆ. ನನ್ನ ಕ್ಷೇತ್ರದಲ್ಲಿ ಬರುವ ಆಲೂರಿನಲ್ಲಿ ಕೇಂದ್ರ ಸರ್ಕಾರದ ವತಿಯಿಂದ ಕುಡಿಯುವ ನೀರಿನ ವ್ಯವಸ್ಥೆಯಾಯಿತು. ಸುಮಾರು 90 ಲಕ್ಷ ರೂಪಾಯಿಗಳು ಅಂದಾಜಿಗೆ ಅದರಲ್ಲಿ ಅರ್ಧ ಭಾಗವನ್ನು ಕೇಂದ್ರ ಸರ್ಕಾರ ಈಗಾಗಲೇ ಕೊಟ್ಟಿದೆ. ಮಾನ್ಯ ಬಚ್ಚೇಗೌಡರು ಹಾಗೂ ಪ್ರಧಾನ ಮಂತ್ರಿಗಳು ಬಂದು ಕಳೆದ ವರ್ಷದ ಮೇ ತಿಂಗಳಿನಲ್ಲಿ ಅಲ್ಲಿ ಅಸ್ತಿಭಾರವನ್ನೂ ಕೂಡ ಹಾಕಿದರು. ಆ ಕಾರ್ಯಕ್ಕೆ ಆಡಳಿತಾತ್ಮಕ ಮಂಜೂರಾತಿ ಅಂದಿನ ದಿನದಿಂದ ಇವೊತ್ತಿನವರೆಗೂ

ಸಿಕ್ಕಿಲ್ಲ. ಮಾನ್ಯ ಬಚ್ಚೇಗೌಡರು ಅಂದು ತಮ್ಮ ಭಾಷಣದಲ್ಲಿ ಕೇಂದ್ರ ಸರ್ಕಾರ ಏನು ಹಣವನ್ನು ಕೊಟ್ಟಿದೆ ಅದರಲ್ಲಿ ನಿಮ್ಮ ಕಾರ್ಯವನ್ನು ಪ್ರಾರಂಭ ಮಾಡಿ, ರಾಜ್ಯ ಸರ್ಕಾರ ಕೊಡಬೇಕಾದ ಹಣವನ್ನು ಕೊಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದಿದ್ದರು. ಆಡಳಿತಾತ್ಮಕ ಮಂಜೂರಾತಿಯನ್ನು ಕೊಡುವ ಬಗ್ಗೆ ಒಂದು ಪತ್ರ ಕೂಡ ಕಾರ್ಯದರ್ಶಿಗಳಿಗೆ ಬಂದು ಕೂಡಲಾಗಿದೆ. ಈಗಾಗಲೇ ಇದೆಲ್ಲಾ ನಡೆದು 11 ತಿಂಗಳಾಗಿದೆ. ಆದರೂ ಇವೊತ್ತಿನವರೆಗೂ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟಿಲ್ಲ. ಈಗಾಗಲೇ ಕೊಟ್ಟಿದ್ದರೆ ಅಲ್ಲಿನ ಜನರಿಗೆ ನೀರಿನ ವ್ಯವಸ್ಥೆ ಆಗುತ್ತಿತ್ತು. ಆದುದರಿಂದ, ಇದರ ಕಡೆ ಗಮನ ಹರಿಸಿ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡಬೇಕು. ಏಕೆಂದರೆ ನಮ್ಮ ಮಲೆನಾಡಿನ ಕಡೆ ಕೇವಲ 4 ತಿಂಗಳುಗಳಲ್ಲಿ ಮಾತ್ರ ಕಾಮಗಾರಿ ಕೆಲಸವನ್ನು ಮಾಡಬಹುದು. ಮುಂದೆ ಮಳೆ ಬರುವುದರಿಂದ ಕೆಲಸ ಮಾಡುವುದಕ್ಕಾಗುವುದಿಲ್ಲವಾದ ಕಾರಣ ತಕ್ಷಣ ಇದರ ಬಗ್ಗೆ ಕ್ರಮ ತೆಗೆದುಕೊಂಡು ಸರ್ಕಾರ ಆದೇಶ ಹೊರಡಿಸಬೇಕೆಂದು ಕೋರುತ್ತೇನೆ.

ಶ್ರೀ ಬಿ.ಎಸ್.ಬಚ್ಚೇಗೌಡ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಯೋಜನೆ ಒಂದು ಕೋಟಿ ರೂಪಾಯಿಗಳದ್ದಾಗಿದ್ದು ಇದರಲ್ಲಿ 50 ಲಕ್ಷ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಬಂದಿದೆ. 1999-2000ನೇ ಇಸವಿಯಲ್ಲಿ ರಾಜ್ಯ ಸರ್ಕಾರ ಇನ್ನುಳಿದ 50 ಲಕ್ಷ ರೂಪಾಯಿಗಳನ್ನು ಕೊಟ್ಟು ಕಾರ್ಯಕ್ರಮವನ್ನು ಪ್ರಾರಂಭ ಮಾಡಿ ಅದಕ್ಕೆ ಬೇಕಾದ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡಿಸುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತೇನೆ.

(ಛ) ಎಸ್‌ಸಿ:ಎಸ್‌ಟಿ ಕಾರ್ಪೊರೇಷನ್ ವತಿಯಿಂದ ತೆಗೆದ ಬೋರ್‌ವೆಲ್‌ಗಳಿಗೆ ಪಂಪ್‌ಸೆಟ್‌ಗಳನ್ನು ಪೂರೈಕೆ ಮಾಡುವುದು.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲೆಲ್ಲಾ ಎಸ್‌ಸಿ:ಎಸ್‌ಟಿ ಕಾರ್ಪೊರೇಷನ್ ವತಿಯಿಂದ ಕೊರೆದ ಬೋರ್‌ವೆಲ್‌ಗಳಿಗೆ ಎನರ್ಜೈಸ್ (ವಿದ್ಯುದ್ದೀಕರಣ) ಆಗದೇ ಇರುವುದರಿಂದ ಇನ್ನು ಮುಂದೆ ಬೋರ್‌ವೆಲ್‌ಗಳನ್ನು ಕೊರೆಯಬಾರದು ಎಂದು ಆದೇಶ ಮಾಡಿದ್ದಾರೆ. ವಿದ್ಯುದ್ದೀಕರಣವನ್ನು ಮಾಡಲು ಕೆ.ಇ.ಬಿ.ಯವರು ತಯಾರಾಗಿದ್ದರೂ ಕೂಡ ಪಂಪ್‌ಸೆಟ್‌ಗಳು ಪೂರೈಕೆಯಾಗುತ್ತಿಲ್ಲವೆನ್ನುವ ದೂರಿದೆ. ಈ ಪಂಪ್‌ಸೆಟ್ ಬಗ್ಗೆ ಹಿಂದೆ ಒಂದು ದೊಡ್ಡ ಹಗರಣವೇ ನಡೆದಿದೆ. 4,000 ಪಂಪ್‌ಸೆಟ್‌ಗಳನ್ನು ಸರ್ಕಾರದ ಆದೇಶದ ಪ್ರಕಾರ ಎಸ್.ಎಸ್.ಐ. ಯೂನಿಟ್‌ಗಳಿಂದೇ ಪರ್ಚೇಸ್ ಮಾಡಬೇಕು ಎಂದು ಹೇಳಿದ್ದರೂ ಕೂಡ ಕೆ.ಎಸ್.ಐ.ಎಮ್.ಸಿ.ಯಿಂದ ಯಾರಿಗೋ ಸಾಲ್ವು ಜನರಿಗೆ ಅವಾರ್ಡ್ ಹಾಕಿ ಆ 4000 ಪಂಪ್‌ಸೆಟ್‌ಗಳನ್ನು ಸಪ್ಲೈ ಮಾಡುವುದಕ್ಕಾಗದೇ ದೊಡ್ಡ ಗೊಂದಲ ಉಂಟಾಗಿ ಈ ಬಗ್ಗೆ ಬಹುಶಃ ವಿಧಾನ ಪರಿಷತ್ತಿನಲ್ಲಿ ದೊಡ್ಡ ಗಲಾಟೆಯೇ ಆದಮೇಲೆ ಇದರ ಬಗ್ಗೆ ತನಿಖೆ ಮಾಡಲು ಸಮಿತಿ ರಚನೆಯಾಗಿ ಅದಕ್ಕೆ ಕೆ.ಹೆಚ್.ಶ್ರೀನಿವಾಸ್‌ರವರು ಅಧ್ಯಕ್ಷರಾಗಿ ತನಿಖೆ ಮಾಡಿರುವ ಬಗ್ಗೆ ಸಮಿತಿ ತನ್ನ ವರದಿಯನ್ನೂ ಕೂಡ ಸರ್ಕಾರಕ್ಕೆ ಈಗಾಗಲೇ ಕೊಟ್ಟಿದೆ. ಈ ವರದಿಯ 15, 16 ಮತ್ತು 17ನೇ ಅನುಬಂಧದಲ್ಲಿ ಏನು ಹೇಳಲಾಗಿದೆಯೋ ಅದರಂತೆ ಸರ್ಕಾರ ಕಾರ್ಯಕ್ರಮ ಕೈಗೊಳ್ಳುತ್ತದೆಯೇ